

# ಅಬ್ಬಾ...ದುಬಾರಿ ಶಿಲ್ಪ



ಶ್ವೇತವರ್ಣದ ಕಮಲದೊಳಗೆ ಉದ್ಭವಿಸಿ ಬಂದಂತೆ ಕಾಣುವ ಪುಟಾಣಿ ಕೃಷ್ಣನ ಕೊಳಲನೂದುವ ಭಂಗಿಗೆ ಶರಣಾಗದವರಿಲ್ಲ. ಅದುರುವ ಖಂಡಗಳ ಕುದುರೆಯ ಮುಖಕ್ಕೆ ಕೆನ್ನೆಯೊತ್ತಿ ತನ್ಮಯಳಾಗಿರುವ ಹರೆಯದ ಹುಡುಗಿಯ ಕಲ್ಪನಾ ವಿಲಾಸ ಮನಸ್ಸಿಗೆ ಮುದನೀಡುತ್ತದೆ. ಚಕ್ರಾಕಾರದ ದೊಡ್ಡ ಕಿರೀಟಧಾರಿಣಿಯಾದ ಧನದೇವತೆ ಲಕ್ಷ್ಮೀಯ ಸೌಂದರ್ಯ ಹಾಗೂ ನವಿಲಿನ ಮೊಗ ಇರುವ ದೊಡ್ಡದೊಂದು ದೋಣಿಯಲ್ಲಿ ಕುಳಿತು ನರ್ತಕಿಯರ ನೃತ್ಯವನ್ನು ಸವಿಯುತ್ತಿರುವ ಮಹಾರಾಣಿಯ ಸೊಬಗು ವರ್ಣಿಸಲಸದಳ. ಹಾಗೆಯೇ ಪ್ರೇಮಿಗಳಿಬ್ಬರೂ ದೀರ್ಘ ಚುಂಬನದಲ್ಲಿ ತೊಡಗಿರುವ ಶಿಲ್ಪ ವೀಕ್ಷಕರಿಗೆ ಕಚಗುಳಿ ಇಡುತ್ತದೆ.

ಸಬ್‌ಲೈಮ್ ಗ್ಯಾಲರಿಯಲ್ಲಿ ಪ್ರದರ್ಶನಗೊಂಡಿರುವ ಒಂದೊಂದು ಶಿಲ್ಪದ ಸೊಬಗೂ ಮನಸ್ಸಿಗೆ ಆಪ್ತ ಅನುಭವ ನೀಡುತ್ತದೆ. ಸಾಮಾನ್ಯ ಮನುಷ್ಯನ ಮನದೊಳಗೆ ಅಡಗಿರುವ ನೂರು ಬಗೆಯ ಭಾವಗಳಿಗೆ 'ಯಾದ್ರೊ' ಕಲಾವಿದರು ಶಿಲ್ಪರೂಪ ನೀಡಿ ಭಾವನೆಗಳನ್ನು ಜೀವಂತಗೊಳಿಸಿದ್ದಾರೆ. ಮನಸ್ಸಿನೊಳಗೆ ಅವಿತಿರುವ ಭಾವಗಳು, ಕನಸುಗಳು, ಇತಿಹಾಸ, ಪುರಾಣ, ಕಾವ್ಯ, ಪ್ರಕೃತಿ ಈ ಎಲ್ಲವು ಕಲಾಕೃತಿಗಳಿಗೆ ಸ್ಫೂರ್ತಿ ತುಂಬಿವೆ.

ನುಣುಪು ಶಿಲ್ಪಗಳ ತಯಾರಿಕೆಯಲ್ಲಿ ಜನಪ್ರಿಯ ಬ್ರ್ಯಾಂಡ್ ಆಗಿರುವ ಸ್ಪೇನ್‌ನ 'ಯಾದ್ರೊ'ಗೆ ಈಗ ಅರವತ್ತು ವಸಂತಗಳ ಸಂಭ್ರಮ. ಇದೇ ಖುಷಿಯಲ್ಲಿ ಯುಬಿ ಸಿಟಿಯಲ್ಲಿರುವ ಸಬ್‌ಲೈಮ್ ಆರ್ಟ್ ಗ್ಯಾಲರಿ 'ಯಾದ್ರೊ'ನ ಕೆಲವು ಐತಿಹಾಸಿಕ ಆಕರ್ಷಕ ಶಿಲ್ಪ ಕಲಾಕೃತಿಗಳನ್ನು ಪ್ರದರ್ಶನಕ್ಕೆ ಇರಿಸಿದೆ. 'ಏರಿಯನ್ ಆನ್ ಸೀ' ಶಿಲ್ಪ ಈ ಪ್ರದರ್ಶನದ ಪ್ರಮುಖ ಆಕರ್ಷಣೆ. ಇದರ ಜತೆಗೆ ಧನದೇವತೆ ಲಕ್ಷ್ಮೀ, ಸ್ತ್ರೀಲೋಲ ಶ್ರೀಕೃಷ್ಣನ ವಿಗ್ರಹಗಳು ಮನಸೆಳೆಯುತ್ತವೆ.

'ಯಾದ್ರೊ' ಶಿಲ್ಪಕಲಾಕೃತಿ ತಯಾರಿಸಲು ಪೋರ್ಸೆಲಿನ್ (ನಯವಾದ ಮತ್ತು ಹೊಳಪುಳ್ಳ ಒಂದು ಬಗೆಯ ಮಣ್ಣು) ಎಂಬ ಒಂದು ವಿಶಿಷ್ಟ ಬಗೆಯ ಮಣ್ಣನ್ನು ಬಳಕೆ ಮಾಡಲಾಗುತ್ತದೆ. ವಿಶ್ವದ ಅತ್ಯಂತ ಜನಪ್ರಿಯ ಬ್ರ್ಯಾಂಡ್ ಆದ 'ಯಾದ್ರೊ'ನ ಸುಂದರವಾದ ಶಿಲ್ಪಗಳು ಗುಣಮಟ್ಟ ಹಾಗೂ ಸೌಂದರ್ಯದಿಂದ ಕಲಾರಸಿಕರ ಮನಸೆಳೆಯುತ್ತದೆ. ಅಂದಹಾಗೆ, ಯಾದ್ರೊ ಬ್ರ್ಯಾಂಡ್ ಹುಟ್ಟುಹಾಕಿದ್ದು ಸ್ಪೇನ್‌ನ ವೇಲೆನ್ಸಿಯಾದ ಖ್ಯಾತ ಶಿಲ್ಪ ಕಲಾವಿದ ಸಹೋದರರಾದ ಜಾನ್, ಜೋಸ್ ಮತ್ತು ವಿನ್ಸೆಂಟ್ ಯಾದ್ರೊ (1953). ಈ ಬ್ರ್ಯಾಂಡ್ ಇಂದು 123 ದೇಶಗಳಲ್ಲಿ ಜನಪ್ರಿಯತೆ ಗಳಿಸಿದೆ. ಭಾರತಕ್ಕೆ ಕಾಲಿಟ್ಟು 12 ವರ್ಷಗಳು ಕಳೆದಿದ್ದು, ಇಲ್ಲೂ ಸಾಕಷ್ಟು ಜನಪ್ರಿಯತೆ ಗಳಿಸಿದೆ.

'ಯಾದ್ರೊ'ನಲ್ಲಿ ವಿವಿಧ ಬಗೆಯ ಹಾಗೂ ವಿವಿಧ ಶ್ರೇಣಿಯ ಶಿಲ್ಪಕಲಾಕೃತಿಗಳು ಲಭ್ಯ. ಸಾಂಪ್ರದಾಯಿಕ, ಐತಿಹಾಸಿಕ, ಆಧುನಿಕ ಹೀಗೆ ಎಲ್ಲ ಬಗೆಯ ಶಿಲ್ಪಗಳಿವೆ. ಮಿರುಗುಟ್ಟುವ ಮೇಲ್ಮೈನ ಈ ಶಿಲ್ಪಗಳ ಚೆಲುವು ಕಲಾಪ್ರಿಯರನ್ನು ಸೆಳೆಯುವ ಗುಣಹೊಂದಿವೆ. ವಿದೇಶಿ ಕಲಾವಿದರು ಭಾರತೀಯ ನೇಟಿವಿಟಿಯನ್ನು ಅರಿತುಕೊಂಡು ಪುರಾಣ ಪುರುಷರ ಶಿಲ್ಪಗಳನ್ನು ಅಚ್ಚುಕಟ್ಟಾಗಿ ರೂಪಿಸಿರುವುದು ಅಚ್ಚರಿ ಮೂಡಿಸುತ್ತದೆ. ಸಬ್‌ಲೈಮ್ ಗ್ಯಾಲರಿಯಲ್ಲಿ ಪ್ರದರ್ಶನಗೊಂಡಿರುವ 'ಏರಿಯನ್ ಆನ್ ಸೀ' ಶಿಲ್ಪ ಕಲಾಕೃತಿಯ ಬೆಲೆ ₹15 ಲಕ್ಷ. ಹಾಗೆಯೇ ಲಕ್ಷ್ಮೀ ವಿಗ್ರಹದ ಬೆಲೆ ₹7.5 ಲಕ್ಷ. ಉಳಿದಂತೆ ಇಲ್ಲಿ ಪ್ರದರ್ಶನಗೊಂಡಿರುವ ಅನೇಕ ಶಿಲ್ಪಕಲಾಕೃತಿಗಳ ಬೆಲೆ ₹1 ಲಕ್ಷಕ್ಕಿಂತ ಅಧಿಕವಿದೆ. ಅಕ್ಟೋಬರ್ 18ಕ್ಕೆ ಕೊನೆಗೊಳ್ಳಲಿರುವ ಈ ಶಿಲ್ಪಗಳನ್ನು ಕಣ್ತುಂಬಿಕೊಳ್ಳಲು ಬಯಸುವವರು ಒಮ್ಮೆ ಹೋಗಿ ಬರಬಹುದು.

ಸ್ಥಳ: ಸಬ್‌ಲೈಮ್ ಆರ್ಟ್ ಗ್ಯಾಲರಿಯಾ, ಯುಬಿ ಸಿಟಿ. ಸಮಯ: ಬೆಳಿಗ್ಗೆ 11ರಿಂದ ರಾತ್ರಿ 8

-ಎಸ್.ಬಿ.

